# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೮೬೭
http://www.kasapa.in e-mail : kannadaparishattu@gmail.com

ಸ್ಥಾಪನೆ : ೧೯೧೫

ಕ್ರಮಸಂಖ್ಯೆ : ಕಸಾಪ / ದತ್ತಿ ಕಾರ್ಯಕ್ರಮ / ೨೦೨೧–೨೨ ದಿನಾಂಕ : ೧೨–೦೧–೨೦೨೨



ಇವರಿಗೆ

ಸಂಪಾದಕರು / ಮುಖ್ಯ ವರದಿಗಾರರು
.........................................ಬೆಂಗಳೂರು

ಮಾನ್ಯರೆ,

## ಪತ್ರಿಕಾ ಹೇಳಿಕೆ – ಪ್ರಕಟಣೆ ಕೃಪೆಗಾಗಿ

## ಕನ್ನಡಪರ ಹೋರಾಟಗಾರರು ಹಾಗೂ ಕರವೇ ಅಧ್ಯಕ್ಷರಾದ
## ಶ್ರೀ ಟಿ.ಎ. ನಾರಾಯಣಗೌಡ ಅವರಿಗೆ
## ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ **ದಿನಾಂಕ ೧೧–೦೧–೨೦೨೨** ರಂದು **ನಾಡೋಜ ಡಾ. ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ** ನಡೆದ ಆಯ್ಕೆ ಸಮಿತಿ ಸಭೆಯಲ್ಲಿ **೨೦೨೨ನೆಯ ಸಾಲಿನ "ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ"**ಗೆ ಕನ್ನಡಪರ ಹೋರಾಟಗಾರರು ಹಾಗೂ ಕರವೇ ಸಂಘದ ಅಧ್ಯಕ್ಷರೂ ಆದ **ಶ್ರೀ ಟಿ.ಎ. ನಾರಾಯಣಗೌಡ** ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪ್ರಶಸ್ತಿಯ ಮೊತ್ತ **ರೂ. ೨೫,೦೦೦ (ಇಪ್ಪತ್ತೈದು ಸಾವಿರ ರೂಪಾಯಿ ಮಾತ್ರ)** ನಗದು, ಸ್ಮರಣಿಕೆ ಹಾಗೂ ಫಲ ತಾಂಬೂಲಗಳನ್ನು ಒಳಗೊಂಡಿರುತ್ತದೆ.

ನಾರಾಯಣಗೌಡರು ಅರಸಿಕೆರೆ ತಾಲ್ಲೂಕಿನಲ್ಲಿ ಜೂನ್ ೧೦, ೧೯೬೭ ರಂದು ಜನಿಸಿದರು. ಕಿರಿ ವಯಸ್ಸಿನಲ್ಲೆ ಹೋರಾಟದ ಹಾದಿ ಹಿಡಿದ ಇವರು, ೯ನೇ ತರಗತಿ ಮುಗಿಯುತ್ತಲೆ ತಮ್ಮ ಊರಿನ ಒಂದು ತಮಿಳು ಆರ್ಕೆಸ್ಟ್ರ ವಿರುದ್ಧ ಹೋರಾಡಿ, ಎರಡು ದಿನಗಳ ಕಾಲ ಜೈಲುವಾಸ ಅನುಭವಿಸಿದರು. ಇದರಿಂದ ತಮ್ಮ ಮನೆಯಲ್ಲಿ ಗೊಂದಲವುಂಟಾಗಿ ಮುಂಬಯಿಗೆ ಹೋದರು. ಅಲ್ಲಿಯೇ ೬ ವರ್ಷಗಳ ಕಾಲ ಐಸ್–ಕ್ರೀಮ್ ಕಾರ್ಖಾನೆಯಲ್ಲಿ ದುಡಿದು ಬೆಂಗಳೂರಿಗೆ ಮರಳಿ ಗಾರ್ಮೆಂಟ್ ಉದ್ಯಮವನ್ನು ನಡೆಸಿ, ಚಾಲುಕ್ಯ ಕನ್ನಡಿಗ ಕೂಟ ಎಂಬ ಸಂಘಟನೆಯನ್ನು ಕಟ್ಟಿದರು. ತದನಂತರ ತಮ್ಮದೇ "ಶ್ರೀಮಾತ" ಧ್ವನಿ ಮುದ್ರಣಾ ಕಂಪನಿಯೊಂದು ಸ್ಥಾಪಿಸಿದರು.

ಶ್ರೀ ಟಿ ಎ ನಾರಾಯಣ ಗೌಡರು ಕನ್ನಡಪರ ಸಂಘಟನೆಯಾದ ಕರ್ನಾಟಕ ರಕ್ಷಣಾ ವೇದಿಕೆ (ಕ.ರ.ವೇ)ಯ ಸ್ಥಾಪಿತರಲ್ಲೊಬ್ಬರು ಹಾಗು ಪ್ರಸ್ತುತ ಅಧ್ಯಕ್ಷರು. ಕ.ರ.ವೇ ರಾಜ್ಯಮಟ್ಟದಲ್ಲಿ ಸಂಘಟನೆಯಾಗುವಲ್ಲಿ ನಾರಾಯಣ ಗೌಡರು ಪ್ರಮುಖ ಪಾತ್ರ ವಹಿಸಿದ್ದಾರೆ. ಇಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯದ ಎಲ್ಲೆಡೆ ತನ್ನ ಸದಸ್ಯರನ್ನು ಹೊಂದಿದೆ.

ರಾಜ್ಯ ವ್ಯಾಪ್ತಿಯಲ್ಲಿ ಹೋರಾಟ ನಡೆಸಿ, ಮುಖ್ಯವಾಗಿ ಬೆಳಗಾವಿಯಲ್ಲಿನ ಕನ್ನಡ ಭಾಷಿಕರ ಪರವಾಗಿಯೂ ಅನೇಕ ಹೋರಾಟಗಳನ್ನು ನಡೆಸಿದರು. ಮುಖ್ಯವಾಗಿ ಕನ್ನಡದ ಮಹಾಪೌರರ ಆಯ್ಕೆಯಲ್ಲಿ ಪ್ರಮುಖ ಪಾತ್ರವಹಿಸಿ ಎಂ.ಇ.ಎಸ್. ವಿರುದ್ದ ಹೋರಾಟವನ್ನು ರೂಪಿಸಿದರು.

ಕಾವೇರಿ ನದಿ ನೀರು ಹಂಚಿಕೆಯ ವಿರುದ್ಧ ನಾಡಿನ ರೈತರ ಪರವಾದ ಹೋರಾಟಗಳನ್ನು ರೂಪಿಸಿ, ಅನೇಕ ಪೊಲೀಸ್ ಮೊಕದ್ದಮೆಗಳು ದಾಖಲಾಗಿವೆ, ಬಳ್ಳಾರಿ ಜೈಲುವಾಸ ಸೇರಿದಂತೆ ಸೆರೆವಾಸವನ್ನು ಕಂಡಿದ್ದಾರೆ.

ಅನೇಕ ಕವನ ಸಂಕಲನ – ಲೇಖನ ಸಂಕಲನ ಪತ್ರಿಕೆಗಳಲ್ಲಿ ಅಂಕಣಕಾರರು, ಕರವೇ ನಲ್ನುಡಿ ಪತ್ರಿಕೆಯನ್ನು ಪ್ರಕಟಿಸಿ ಸಾಹಿತ್ಯ ಪರಂಪರೆಯನ್ನು ಕ್ರಿಯಾಶೀಲಗೊಳಿಸಿದ್ದಾರೆ.

ಆಯ್ಕೆ ಸಮಿತಿ ಸಭೆಯಲ್ಲಿ ಸದಸ್ಯರಾದ **ಎಂ. ಪ್ರಕಾಶಮೂರ್ತಿ,** ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ **ಶ್ರೀ ನೇ. ಭ ರಾಮಲಿಂಗಶೆಟ್ಟಿ,** ಗೌರವ ಕೋಶಾಧ್ಯಕ್ಷರಾದ ಶ್ರೀ **ಪಟೇಲ್‌ಪಾಂಡು** ಅವರುಗಳು ಉಪಸ್ಥಿತರಿದ್ದರು.

**(ನೇ.ಭ. ರಾಮಲಿಂಗಶೆಟ್ಟಿ)**
ಗೌರವ ಕಾರ್ಯದರ್ಶಿಗಳು